


> ನಾವೆಲ್ಲರೂ ಬೌದ್ಧರು ಹೇಳುವಂತೆ 'ಮತ್ತೊಂದು ಅರ್ಧವನ್ನು' ಕಂಡುಕೊಳ್ಳಬೇಕು. ಅದೇ ಸಮುದಾಯವನ್ನು ಕಟ್ಟಿಕೊಳ್ಳುವ ದಾಹವಾಗುತ್ತದೆ. ತತ್ವಶಾಸ್ತ್ರ ಮತ್ತು ಧರ್ಮ ಈ ಮೂಲಸ್ಥಿತಿ ಅಥವಾ ಸಂಕಟದಿಂದ ಹುಟ್ಟಿಕೊಂಡಿದೆ. ಕಾವ್ಯ ಎನ್ನುವುದು ಒಂಟಿತನ ಮತ್ತು ಸಮುದಾಯದ ನಡುವಿನ ಸೇತುವೆಯಿದ್ದಂತೆ.

ಮತ್ತು ನೈಸರ್ಗಿಕ ಶಕ್ತಿಯ ಉದಾತ್ತತೆ ಒಳಗೊಂಡಿರುವುದನ್ನು ಕಂಡು ಆಘಾತಕ್ಕೆ ಒಳಗಾಗಿದ್ದೆ. ಇದೇ ಆಗ ಬರೆದ '**Conjunctions and Disjunctions**' ಎನ್ನುವ ಪುಸ್ತಕದ ವಸ್ತು.

◆ **ಭಾರತದಲ್ಲಿ ನೀವು ಕಳೆದ ಸಮಯ ಕಾವ್ಯದ ಮೇಲೆ ಬೀರಿದ ಪ್ರಭಾವದ ಕುರಿತು ಏನು ಹೇಳುವಿರಿ?**

ನಾನು ಭಾರತದಲ್ಲಿ ವಾಸಿಸದೆ ಹೋಗಿದ್ದರೆ '**Blanco**' ಅಥವಾ '**Eastern Slope**'ನ ಬಹುತೇಕ ಕವಿತೆಗಳನ್ನು ಬರೆಯಲಾಗುತ್ತಿರಲಿಲ್ಲ. ಏಷ್ಯಾದಲ್ಲಿ ಕಳೆದ ಸಮಯ ತಾತ್ಕಾಲಿಕವಾಗಿ ನಿಂತಂತಿತ್ತು. ಸಮಯ ನಿಧಾನಗತಿಯಲ್ಲಿ ಸರಿಯುತ್ತ ಬಹುದೊಡ್ಡ ಅವಕಾಶವು ಸೃಷ್ಟಿಯಾಗಿತ್ತು. ಕೆಲವು ಅಪರೂಪದ ಗಳಿಗೆಗಳಲ್ಲಿ ಜಗತ್ತಿನೊಂದಿಗೆ ಒಂದಾದ ಭಾವವನ್ನು ಅನುಭವಿಸಿದ್ದೆ. ಬಾಲ್ಯದಲ್ಲಿ ಆ ತರಹ ಅನುಭವಗಳಾಗುತ್ತವೆ. ಆದರೆ, ಆಧುನಿಕ ಬದುಕು ನಾವು ದೊಡ್ಡವರಾದ ಮೇಲೆ ಆ ಅನುಭವವನ್ನು ನೀಡುವುದು ಅಪರೂಪ. ನನ್ನ ಕಾವ್ಯಕ್ಕೆ ಸಂಬಂಧಿಸಿದಂತೆ ಈ ಅವಧಿಯು '**Salamander**' ಕವನದಿಂದ ಆರಂಭವಾಗಿ ಪೂರ್ವದ ಇಳಿಜಾರಿನಲ್ಲಿ ಜಾರುತ್ತಾ '**The Monkey Grammarian**'ನಲ್ಲಿ ಕೊನೆಗೊಳ್ಳುತ್ತದೆ.

◆ **ಬರವಣಿಗೆಗೆ ವೇಳಾಪಟ್ಟಿ ಹಾಕಿಕೊಂಡಿರುವಿರಾ?**

ನಿರ್ದಿಷ್ಟ ಸಮಯವನ್ನೇನೂ ಇಟ್ಟುಕೊಂಡಿಲ್ಲ. ಹಲವು ವರ್ಷಗಳ ಕಾಲ ನನ್ನ ಬಿಡುವಿನ ಸಮಯದಲ್ಲಿ ಬರೆದೆ. ಹೊಟ್ಟೆಹೊರೆಯಲು ಏನೇನೋ ಕೆಲಸ ಮಾಡುತ್ತಿದ್ದೆ. ನ್ಯಾಷನಲ್ ಆರ್ಕೈವ್‌ನಲ್ಲಿ ಕೆಲಸ, ಬ್ಯಾಂಕಿನಲ್ಲಿದ್ದೆ, ಪತ್ರಕರ್ತನಾಗಿದ್ದೆ, ಕಡೆಗೆ ರಾಜತಾಂತ್ರಿಕ ಸೇವೆಯಲ್ಲೊಂದು ಉದ್ಯೋಗ ಹಿಡಿದೆ. ಈ ಯಾವ ಕೆಲಸಗಳು ನನ್ನ ಕಾವ್ಯೋದ್ಯೋಗದ ಮೇಲೆ ಪರಿಣಾಮ ಬೀರಲಿಲ್ಲ.

◆ **ಯಾವುದಾದರೂ ನಿರ್ದಿಷ್ಟ ಬಗೆಯ ಸ್ಥಳವನ್ನು ಬರವಣಿಗೆಗೆ ಆಯ್ಕೆ ಮಾಡಿಕೊಳ್ಳುವಿರಾ?**

ಕಾದಂಬರಿಕಾರನಿಗೆ ಟೈಪ್‌ರೈಟರ್ ಅಗತ್ಯ. ಆದರೆ, ಕವನವನ್ನು ಎಲ್ಲಿ ಬೇಕಾದರೂ ಯಾವಾಗ ಬೇಕಾದರೂ ಬರೆಯಬಹುದು. ಕೆಲವೊಮ್ಮೆ ಬಸ್ಸಿನಲ್ಲಿರುವಾಗಲೋ ಇಲ್ಲವೇ ರಸ್ತೆಯಲ್ಲಿ ನಡೆದು ಹೋಗುವಾಗಲೋ ಮನಸ್ಸಿನಲ್ಲೇ ಕವನವನ್ನು ಬರೆದಿರುತ್ತೇನೆ. ನಡಿಗೆಯ ಲಯ ಸಾಲುಗಳನ್ನು